# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೆಚ್.ಎ.ಎಲ್ ಏರ್‌ಪೋರ್ಟ್

ಉಪವಿಭಾಗ ಮಹದೇವಪುರ ವಲಯ, ಬೆಂಗಳೂರು

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೆಚ್.ಎ.ಎಲ್/ಪಿಆರ್/09/2020-21 ದಿನಾಂಕ: 06-02-2021

## ವಾರ್ಡ್ ಸಮಿತಿ ಸಭೆಯ ನಡಾವಳಿಗಳು.

ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮಾನ್ಯ ಆಯುಕ್ತರು ಕಛೇರಿ ಆದೇಶ ಸಂ: ಬಿ12(5)/ಪಿಆರ್/35/2020-21 ದಿನಾಂಕ:04/12/2020, ರಂತೆ ದಿನಾಂಕ;03.02.2021 ರಂದು ನೋಡಲ್ ಅಧಿಕಾರಿ ಶ್ರೀ.ಟಿ.ಎಂ.ನಾರಾಯಣಸ್ವಾಮಿ, ಸಹಾಯಕ ಕಾರ್ಯಪಾಲಕ ಅಭಿಯಂತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,ಇವರ ಅಧ್ಯಕ್ಷತೆಯಲ್ಲಿ ಹೆಚ್.ಎ.ಎಲ್ ಏರ್‌ಪೋರ್ಟ್ ಉಪವಿಭಾಗದ ವಾರ್ಡ್-56 ಎ.ನಾರಾಯಣಪುರ ವಾರ್ಡ್ ಕಛೇರಿಯಲ್ಲಿ ನಡೆದ ವಾರ್ಡ್ ಸಮಿತಿ ನಡೆಸಿದ ಸಭೆಯ ನಡಾವಳಿಗಳು ಈ ಕೆಳಕಂಡಂತೆ ಇರುತ್ತದೆ.

ಉಪಸ್ಥಿತರು:

| ಕ್ರ.ಸಂ | ಹೆಸರು | ಹುದ್ದೆ |
|---|---|---|
| | ಅಧಿಕಾರಿಗಳು | |
| 1. | ಶ್ರೀ.ಟಿ.ಎಂ.ನಾರಾಯಣಸ್ವಾಮಿ | ವಾರ್ಡ್ ಸಮಿತಿ ಸಭೆಯ ನೋಡಲ್ ಅಧಿಕಾರಿ ವಾ.ನಂ.56, ಸಹಾಯಕ ಕಾರ್ಯಪಾಲಕ ಅಭಿಯಂತರ ಬಿಬಿಎಂಪಿ |
| 2. | ಶ್ರೀ.ಜಿ.ಡಿ.ಸೋಮಯ್ಯ | ವಾರ್ಡ್ ಸಮಿತಿಯ ಸದಸ್ಯ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ.56 ಎ.ನಾರಾಯಣಪುರ |
| 3. | ಶ್ರೀ.ವೆಂಕಟರಮಣಪ್ಪ | ಸಹಾಯಕ ಕಾರ್ಯಪಾಲಕ ಅಭಿಯಂತರ ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 4. | ಶ್ರೀ.ರಾಘವೇಂದ್ರ | ಹಿರಿಯ ಆರೋಗ್ಯ ಪರಿವೀಕ್ಷಕರು |
| 5. | ಶ್ರೀ.ಅಮೃತ ಮಣಿ ನಾಯಕ್ | ಕಂದಾಯ ಅಧಿಕಾರಿ |
| 6. | ಶ್ರೀ.ಅಮಿತ್.ಬಿ.ಸಿ | ಕಿರಿಯ ಆರೋಗ್ಯ ಪರಿವೀಕ್ಷಕರು |
| 7. | ಪ್ರಶಾಂತ್ ಕುಮಾರ್ .ಕೆ | ಕಂದಾಯ ವಸೂಲಿಗಾರರು, ವಾರ್ಡ್ ನಂ.56 |
| 8. | ಶ್ರೀ.ಅಕಿಲ್ | ಕಂದಾಯ ವಸೂಲಿಗಾರರು, ವಾರ್ಡ್ ನಂ.56 |
| 9. | ಶ್ರೀ.ವಿಜಯ್.ಜಿ | ಕಂದಾಯ ವಸೂಲಿಗಾರರು, ವಾರ್ಡ್ ನಂ.56 |
| 10. | ಶ್ರೀ.ತಿಪ್ಪೆಸ್ವಾಮಿ | ಸ್ಟಾಫ್ ನರ್ಸ್ |
| 11. | ಶ್ರೀ.ಗಣಪತಿ ರಾವ್ | ಮಾರ್ಷಲ್, ವಾರ್ಡ್ ನಂ.56 |
| | ಸಂಘದ ಪದಾಧಿಕಾರಿಗಳು ಹಾಗೂ ಸಾರ್ವಜನಿಕರು | |
| 9. | ಶ್ರೀಮತಿ..ಹೇಮಲಾತ | ಎ-ನಾರಾಯಣಪುರ |
| 10. | ಶ್ರೀ.ಎಂ.ಶಂಕರ್ | ಎ-ನಾರಾಯಣಪುರ |
| 11. | ಶ್ರೀಮತಿ.ಮಂಗಳ | ಎ-ನಾರಾಯಣಪುರ |
| 12. | ಶ್ರೀಮತಿ.ಅಧಿಲಕ್ಷ್ಮಿ | ಎ-ನಾರಾಯಣಪುರ |
| 13. | ಶ್ರೀ.ಕ್ವರ.ಹನುಮಪ್ಪ | ಎ-ನಾರಾಯಣಪುರ |

| | | |
|---|---|---|
| | ಶ್ರೀ.ಎನ್ ರಾಜು | ಎ-ನಾರಾಯಣಪುರ |
| 14. | ಶ್ರೀ.ಸುನಿಲ್ ಎಸ್. | ಎ-ನಾರಾಯಣಪುರ |
| 15. | ಶ್ರೀ.ವಸಂತ್ ಕುಮಾರ್.ಎಸ್ | ಎ-ನಾರಾಯಣಪುರ |
| 16. | ಶ್ರೀ.ಪ್ರದೀಪ್ ರೆಡ್ಡಿ | ಎ-ನಾರಾಯಣಪುರ |
| 17. | ಶ್ರೀ.ಗಣೇಶ್ | ಎ-ನಾರಾಯಣಪುರ |
| 18. | ಶ್ರೀ.ಪಿ.ಶ್ರೀರಾಮುಲು | ಎ-ನಾರಾಯಣಪುರ |
| 19. | ಶ್ರೀ.ಆಯುಬ್ ಅನ್ಸಾರಿ | ಎ-ನಾರಾಯಣಪುರ |
| 20. | | ಎ-ನಾರಾಯಣಪುರ |
| 21. | ಶ್ರೀ.ಚಿಟ್ಟಿ | |

1. **ಕೋವಿಡ್-19ರ ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗೃತ ಕ್ರಮಗಳ ಬಗ್ಗೆ.**

ಈ ಕುರಿತು ಚರ್ಚಿಸಲಾಗಿ, ವಾರ್ಡ್‌ಗೆ ಸಂಬಂಧಿಸಿದ ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು ಆರೋಗ್ಯ ಅಧಿಕಾರಿಗಳು ವಾರ್ಡ್‌ನಲ್ಲಿ ಕೋವಿಡ್-19 ಸಂಬಂಧಪಟ್ಟ ಸೋಂಕು ಹರಡುವುದನ್ನು ತಡೆಗಟ್ಟುವ ಎಲ್ಲಾ ಮುಂಜಾಗೃತ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವುದಾಗಿ ತಿಳಿಸಿರುತ್ತಾರೆ, ಆರೋಗ್ಯ ಅಧಿಕಾರಿಗಳು ಕೋವಿಡ್ ಲಸಿಕೆಯನ್ನು ಫ್ರಾಂಟ್ ಲೈನ್ ವಾರಿಯರ್ಸ್‌ಗೆ ನೀಡುತ್ತಿದ್ದು ಅತೀ ಶೀಘ್ರವಾಗಿ ಜನ ಸಾಮಾನ್ಯರಿಗೆ ನೀಡುವುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಸೋಂಕು ಹರಡುವುದನ್ನು ತಡೆಗಟ್ಟುವ ಸಲುವಾಗಿ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಮತ್ತು ಸಂಬಂದಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

2. **ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗಳಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ**

ವಾರ್ಡ್ ವ್ಯಾಪ್ತಿಯ ನ್ಯೂ.ಬ್ರಿಲ್ಯೆಂಟ್ ಶಾಲೆ ರಸ್ತೆಯಲ್ಲಿ ಒಳ ಚರಂಡಿ ದುರಸ್ಥಿಗೊಂಡಿದ್ದು ಹೊಸ ಒಳಚರಂಡಿ ಅಳವಡಿಸಲು ಕೋರಿರುತ್ತಾರೆ, ಮತ್ತು ಕಮಲಮ್ಮ ಲೇಔಟ್‌ನಲ್ಲಿ ಹೊಸದಾಗಿ 150.00 ಮೀ ಒಳಚರಂಡಿ ಮಾಡಿ ಕೊಡುವಂತೆ ಸಾರ್ವಜನಿಕರು ಕೋರಿರುತ್ತಾರೆ. ಸದರಿ ಕಾಮಗಾರಿಗಳನ್ನು ಕೂಡಲೇ ಕೈಗೊಂಡು ಪೂರ್ಣಗೊಳಿಸಿ ನಿವಾಸಿಗಳ ಸಮಸ್ಯೆಗಳನ್ನು ಬಗೆಹರಿಸುವಂತೆ ಸಂಬಂಧಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಸೂಚಿಸಲಾಯಿತು.

3. **ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ :-**

ವಾರ್ಡ್‌ನ ಅಭಿವೃದ್ದಿ ಕಾಮಗಾರಿಗಳ ಬಗ್ಗೆ ಚರ್ಚಿಸಲಾಗಿದ್ದು ಕಾವೇರಿ ಲೇಔಟ್‌ನಲ್ಲಿ ಚರಂಡಿ ಹಾಳಾಗಿದ್ದು ಹೊಸದಾಗಿ ಚರಂಡಿಯನ್ನು ನಿರ್ಮಿಸಲು ಸಾರ್ವಜನಿಕರು ಕೋರಿರುತ್ತಾರೆ. ಸದರಿ ಕಾಮಗಾರಿಯನ್ನು ಕೈಗೊಳ್ಳುವಂತೆ ಸಭೆಯಲ್ಲಿ ಸಂಬಂಧಪಟ್ಟ ವಾರ್ಡ್ ಅಭಿಯಂತರರಿಗೆ ಸೂಚಿಸಲಾಯಿತು.

4. **2016-17ನೇ ಸಾಲಿನಲ್ಲಿ ಒಂಟಿಮನೆಗಳ ನಿರ್ಮಾಣಕ್ಕೆ ಕಾರ್ಯಾದೇಶ ನೀಡಿದ್ದು, ಇನ್ನು ಪ್ರಾರಂಬಿಸದೇ ಇರುವ ಬಗ್ಗೆ, ಚರ್ಚಿಸುವ ವಿಚಾರ.**

2016-17ನೇ ಸಾಲಿನಲ್ಲಿ ಒಂಟಿಮನೆಗಳ ನಿರ್ಮಾಣಕ್ಕೆ ಕಾರ್ಯಾದೇಶ ನೀಡಿದ್ದು, ಸದರಿ ಫಲಾನುಭವಿಗಳಲ್ಲಿ ಮರಣ ಹೊಂದಿರುವ, ನಿವೇಶನಗಳ ಮಾರಾಟ ಮಾಡಲಾಗಿರುವ ಮತ್ತು ಮೆಟ್ರೋಗೆ ಸ್ವಾಧೀನ ಪಡಿಸಿಕೊಳ್ಳಲಾಗಿರುವ ಹಾಗೂ ಕಛೇರಿಯಲ್ಲಿ ಕಡತಗಳು ಲಭ್ಯವಿಲ್ಲದೇ ಇರುವ ನಿವೇಶನಗಳ ಫಲಾನುಭವಿಗಳ ಒಂಟಿ ಮನೆ ಕಾರ್ಯಾದೇಶಗಳನ್ನು ರದ್ದು ಪಡಿಸುವ ಬಗ್ಗೆ ಚರ್ಚಿಸಿ ತಿರ್ಮಾನಿಸಲಾಯ್ತು.

Scanned with CamScanner

೫. **ಬೀದಿ ದೀಪಗಳ ನಿರ್ವಹಣೆ ಬಗ್ಗೆ:-**

ವಾರ್ಡ್ ವ್ಯಾಪ್ತಿಯಲ್ಲಿ ಬರುವ ಬೀದಿ ದೀಪಗಳ ಸಮರ್ಪಕವಾಗಿ ನಿರ್ವಹಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಲಾಯಿತು.

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ.56 ಎ.ನಾರಾಯಣಪುರ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

06/02/21
ನೋಡಲ್ ಅಧಿಕಾರಿ ಹಾಗೂ
ವಾರ್ಡ್ ಸಮಿತಿ ಅಧ್ಯಕ್ಷರು ಮತ್ತು
ಸಹಾಯಕ ಕಾರ್ಯಪಾಲಕ ಅಭಿಯಂತರರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಪ್ರತಿಯನ್ನು:-

1. ಮಾನ್ಯ ಜಂಟಿ ಆಯುಕ್ತರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
2. ಮುಖ್ಯ ಅಭಿಯಂತರರು, ಮಹದೇವಪುರ ವಲಯ ರವರ ಮಾಹಿತಿಗಾಗಿ ರವಾನಿಸಿದೆ.
3. ಕಛೇರಿ ಪ್ರತಿ.

Scanned with CamScanner